**All India Radio: Bangalore**
**National Bulletin In Kannada**
**30.06.2025 1.10pm.**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**30.06.2025 1.10pm.**

ಮುಖ್ಯಾಂಶಗಳು

೧. ಗ್ರಾಮೀಣ ಭಾಗಗಳಲ್ಲೂ ಪಶು ವೈದ್ಯಕೀಯ ಸೇವೆಯ ಲಭ್ಯತೆ ಅಗತ್ಯ - ರಾಷ್ಟ್ರಪತಿ ದ್ರೌಪದಿ ಮುರ್ಮು ಪ್ರತಿಪಾದನೆ

೨. ಕ್ವಾಡ್ ವಿದೇಶಾಂಗ ಸಚಿವರ ಸಭೆಯಲ್ಲಿ ಪಾಲ್ಗೊಳ್ಳಲು ಸಚಿವ ಡಾ. ಎಸ್. ಜೈಶಂಕರ್ ಇಂದಿನಿಂದ ಅಮೆರಿಕ ಪ್ರವಾಸ

೩. ಐದು ವರ್ಷಗಳ ಬಳಿಕ ಇಂದಿನಿಂದ ಕೈಲಾಸ ಮಾನಸ ಸರೋವರ ಯಾತ್ರೆ ಪುನರಾರಂಭ

೪. ಧರ್ಮಶಾಲಾದಲ್ಲಿಂದು ಕಾಮನ್‌ವೆಲ್ತ್ ಸಂಸದೀಯ ಸಂಸ್ಥೆ ವಾರ್ಷಿಕ ಸಮ್ಮೇಳನ ಉದ್ಘಾಟಿಸಲಿರುವ ಲೋಕಸಭಾಧ್ಯಕ್ಷ ಓಂ ಬಿರ್ಲಾ

೫. ವಿಂಬಲ್ಡನ್ ಗ್ರ್ಯಾಂಡ್ ಸ್ಲ್ಯಾಮ್ ಟೆನ್ನಿಸ್ ಟೂರ್ನಿ ಇಂದಿನಿಂದ ಆರಂಭ

********

ಪ್ರಾಣಿಗಳ ಸೇವೆ ಸಲ್ಲಿಸುವುದು ನೈತಿಕ ಜವಾಬ್ದಾರಿಯಾಗಿದೆ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಪ್ರತಿಪಾದಿಸಿದ್ದಾರೆ. ಎರಡು ದಿನಗಳ ಉತ್ತರಪ್ರದೇಶ ಪ್ರವಾಸದಲ್ಲಿರುವ ರಾಷ್ಟ್ರಪತಿ ಬರೇಲಿಯಲ್ಲಿಂದು ಭಾರತೀಯ ಪಶುವೈದ್ಯಕೀಯ ಸಂಶೋಧನಾ ಸಂಸ್ಥೆಯ ೧೧ನೇ ಘಟಿಕೋತ್ಸವ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು. ಪಶುವೈದ್ಯಕೀಯ ವೃತ್ತಿಪರರು ತಮ್ಮ ತರಬೇತಿ ಮತ್ತು ಧ್ಯೇಯದ ಕುರಿತು ನಿಷ್ಠೆ ಹೊಂದಿರುವುದು ಅಗತ್ಯವಾಗಿದೆ. ಗ್ರಾಮೀಣ ಭಾಗಗಳಲ್ಲೂ ಪಶುವೈದ್ಯಕೀಯ ಸೇವೆಗಳು

ಲಭ್ಯವಾಗಿಸುವ ಅಗತ್ಯದ ಕುರಿತು ಒತ್ತಿ ಹೇಳಿದರು. ಇತರ ಕ್ಷೇತ್ರಗಳಂತೆ ಪಶು ವೈದ್ಯಕೀಯ ಕ್ಷೇತ್ರದಲ್ಲೂ ತಂತ್ರಜ್ಞಾನ ಕ್ರಾಂತಿಕಾರಿ ಪರಿವರ್ತನೆ ತರುವ ಕ್ಷಮತೆ ಹೊಂದಿದೆ. ತಂತ್ರಜ್ಞಾನದ ಬಳಕೆಯಿಂದ ದೇಶದ ಪಶು ವೈದ್ಯಕೀಯ ಚಿಕಿತ್ಸಾ ವ್ಯವಸ್ಥೆಯನ್ನು ಸಬಲೀಕರಣಗೊಳಿಸಬಹುದು. ಜಿನೋಮ್ ಮಾರ್ಪಾಡು, ಎಂಬ್ರಾಯ್ ಕಸಿ ತಂತ್ರಜ್ಞಾನನಂತಹ ಆಧುನಿಕ ಕೃತಕ ಬುದ್ಧಿಮತ್ತೆ ಆಧಾರಿತ ತಂತ್ರಜ್ಞಾನ ಬಳಕೆಯಿಂದ ಈ ಕ್ಷೇತ್ರದಲ್ಲಿ ಕ್ರಾಂತಿಕಾರಿ ಬದಲಾವಣೆ ತರಲು ಸಾಧ್ಯ ಎಂದು ಹೇಳಿದರು.

ಧ್ವನಿ : ರಾಷ್ಟ್ರಪತಿ ದ್ರೌಪದಿ ಮುರ್ಮು

ಈ ಕಾರ್ಯಕ್ರಮದ ನಂತರ ರಾಷ್ಟ್ರಪತಿ ಗೊರಖ್‌ಪೂರ್‌ಗೆ ಪ್ರಯಾಣ ಬೆಳೆಸಲಿಸಲಿದ್ದು, ಅಲ್ಲಿ ಅವರು ಮೂರು ಪ್ರಮುಖ ಸಂಸ್ಥೆಗಳ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ. ರಾಷ್ಟ್ರಪತಿ ಅವರು ಗೊರಖ್‌ಪೂರ್‌ನ ಏಮ್ಸ್‌ನ ಮೊದಲ ಘಟಿಕೋತ್ಸವದಲ್ಲಿ ಪಾಲ್ಗೊಂಡು, ವಿದ್ಯಾರ್ಥಿಗಳಿಗೆ ಪದಕ ಪ್ರದಾನ ಮಾಡಲಿದ್ದಾರೆ.ಪ್ರವಾಸದ ಎರಡನೇ ದಿನವಾದ ನಾಳೆ, ರಾಷ್ಟ್ರಪತಿ ಉತ್ತರ ಪ್ರದೇಶದ ಮೊದಲ ಮಹಾಯೋಗಿ ಗುರು ಗೊರಖನಾಥ್ ಆಯುಷ್ ವಿಶ್ವವಿದ್ಯಾಲಯವನ್ನು ಉದ್ಘಾಟಿಸಲಿದ್ದಾರೆ. ಬಳಿಕ ಅವರು ಮಹಾಯೋಗಿ ಗೊರಖನಾಥ್ ವಿಶ್ವವಿದ್ಯಾಲಯದ ಆರೋಗ್ಯದಾಮ್ ಆವರಣದಲ್ಲಿ ನೂತನ ಶೈಕ್ಷಣಿಕ ಸಂಕೀರ್ಣ, ಸಭಾಂಗಣ, ಪಂಚಕರ್ಮ ಕೇಂದ್ರ ಉದ್ಘಾಟನೆಯೊಂದಿಗೆ ವಿದ್ಯಾರ್ಥಿನಿಯರ ವಸತಿ ನಿಲಯದ ಶಿಲಾನ್ಯಾಸ ನೆರವೇರಿಸಲಿದ್ದಾರೆ.ಪ್ರವಾಸದ ಭಾಗವಾಗಿ ರಾಷ್ಟ್ರಪತಿ ಮುರ್ಮು ಅವರು ಗೊರಖನಾಥ ದೇವಸ್ಥಾನಕ್ಕೆ ಭೇಟಿ ನೀಡಲಿದ್ದು, ವಿಶೇಷ ದರ್ಶನ ಆಯೋಜಿಸಲಾಗಿದೆ. ರಾಷ್ಟ್ರಪತಿ ಅವರ ಪ್ರವಾಸದ ಹಿನ್ನೆಲೆಯಲ್ಲಿ ಬರೆಲೀ ಮತ್ತು ಗೊರಖ್‌ಪುರದಲ್ಲಿ ಕಠಿಣ ಭದ್ರತಾ ವ್ಯವಸ್ಥೆ ಕೈಗೊಳ್ಳಲಾಗಿದೆ.

********

ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ ಅವರ ಆಹ್ವಾನದ ಮೇರೆಗೆ, ನಾಳೆ ನಡೆಯಲಿರುವ ಕ್ವಾಡ್ ವಿದೇಶಾಂಗ ಸಚಿವರ ಸಭೆಯಲ್ಲಿ ಭಾಗವಹಿಸಲು, ವಿದೇಶಾಂಗ ಸಚಿವ ಎಸ್. ಜೈಶಂಕರ್ ಇಂದಿನಿಂದ, ಮೂರು ದಿನಗಳ ಅಧಿಕೃತ ಅಮೆರಿಕ ಪ್ರವಾಸ ಕೈಗೊಳ್ಳಲಿದ್ದಾರೆಮುಕ್ತ

ಇಂಡೋ-ಪೆಸಿಫಿಕ್‌ಗಾಗಿ ಸಾಮಾನ್ಯ ದೃಷ್ಟಿಕೋನವನ್ನು ಮುನ್ನಡೆಸುವ ಹೊಸ ಪ್ರಸ್ತಾಪಗಳ ಮೇಲೆ, ಕ್ವಾಡ್ ಗುಂಪು ಗಮನ ಕೇಂದ್ರೀಕರಿಸುತ್ತದೆ ಎಂದು ವಿದೇಶಾಂಗ ಸಚಿವಾಲಯ ಹೇಳಿಕೆಯಲ್ಲಿ ತಿಳಿಸಿದೆ.ನ್ಯೂಯಾರ್ಕ್‌ನಲ್ಲಿರುವ ವಿಶ್ವಸಂಸ್ಥೆಯ ಪ್ರಧಾನ ಕಚೇರಿಯಲ್ಲಿಂದು, 'ಭಯೋತ್ಪಾದನೆಯ ಮಾನವ ವೆಚ್ಚ" ಎಂಬ ಶೀರ್ಷಿಕೆಯ ಪ್ರದರ್ಶನವನ್ನು ಡಾ. ಜೈಶಂಕರ್ ಉದ್ಘಾಟಿಸಲಿದ್ದಾರೆ. ವಿಶ್ವಾದ್ಯಂತ ಭಯೋತ್ಪಾದಕ ಕೃತ್ಯಗಳ ವಿನಾಶಕಾರಿ ಪರಿಣಾಮ ಹಾಗೂ ಭಯೋತ್ಪಾದನೆ ಎದುರಿಸಲು ಅಂತಾರಾಷ್ಟ್ರೀಯ ಸಮುದಾಯ ತೆಗೆದುಕೊಂಡ ಕ್ರಮಗಳನ್ನು ಈ ಪ್ರದರ್ಶನ, ಪ್ರತಿಬಿಂಬಿಸುತ್ತದೆ.

********

ಶ್ರೀಲಂಕಾ ಹಾಗೂ ಭಾರತದ ನಡುವಿನ ವ್ಯಾಪಾರ ಮತ್ತು ಹೂಡಿಕೆ ಸಂಬಂಧಗಳನ್ನು ಬಲಪಡಿಸುವ ಉದ್ದೇಶದೊಂದಿಗೆ ಭಾರತೀಯ ಉದ್ಯಮ ಸಂಘಟನೆ ಸಿಐಐನ ಉನ್ನತ ಮಟ್ಟದ ಉದ್ಯಮ ಪ್ರತಿನಿಧಿಗಳ ನಿಯೋಗ ಶ್ರೀಲಂಕಾ ತಲುಪಿದೆ.

ಐಟಿಸಿ ಅಧ್ಯಕ್ಷರು ೧೫ ಜನರ ನಿಯೋಗದ ನೇತೃತ್ವವನ್ನು ಐಟಿಸಿ ಲಿಮಿಟೆಡ್‌ನ ನಿರ್ವಾಹಕ ನಿರ್ದೇಶಕ ಮತ್ತು ಅಧ್ಯಕ್ಷ ಸಂಜೀವ್ ಪುರಿ ವಹಿಸಿದ್ದಾರೆ. ಭೇಟಿಯ ಭಾಗವಾಗಿ ಭಾರತೀಯ ನಿಯೋಗ ಶ್ರೀಲಂಕಾ ಅಧ್ಯಕ್ಷ ಅನುರಕುಮಾರ ದಿಸ್ಸಾ ನಾಯಕೆ ಹಾಗೂ ಇತರ ಪ್ರಮುಖ ಸಚಿವರು, ಹೂಡಿಕೆ ಮಂಡಳಿ ಮತ್ತು ಪ್ರಮುಖ ಉದ್ಯಮ ನಾಯಕರೊಂದಿಗೆ ಮಾತುಕತೆ ನಡೆಸಲಿದ್ದಾರೆ.ಆರ್ಥಿಕ ಸಹಕಾರ, ವ್ಯಾಪಾರ ಮತ್ತು ಕೈಗಾರಿಕಾ ಪಾಲುದಾರಿಕೆ ಬಲಪಡಿಸಲು ವಿವಿಧ ಮಾರ್ಗಗಳನ್ನು ಅನ್ವೇಷಿಸುವ ನಿಟ್ಟಿನಲ್ಲಿ ನಡೆಯುವ ಕಾರ್ಯ ನಿರ್ವಾಹಕ ಅಧಿಕಾರಿಗಳ ದುಂಡುಮೇಜಿನ ಸಭೆ ಈ ಭೇಟಿಯ ಪ್ರಮುಖ ಭಾಗವಾಗಿದೆ.

********

ಐದು ವರ್ಷಗಳ ಬಳಿಕ ಇಂದು ಕೈಲಾಸ ಮಾನಸ ಸರೋವರ ಯಾತ್ರೆ ಪುನರಾರಂಭವಾಗುತ್ತಿದೆ. ಕೋವಿಡ್-೧೯ ರ ಕಾರಣದಿಂದ ೨೦೨೦ರಲ್ಲಿ ಯಾತ್ರೆಯನ್ನು ಸ್ಥಗಿತಗೊಳಿಸಲಾಗಿತ್ತು. ಈ ಬಾರಿ ಯಾತ್ರೆ ಸಿಕ್ಕಿಂನ ನಾಥುಲಾಪಾಸ್ ಮತ್ತು ಉತ್ತರಾಖಂಡದ ಲಿಪುಲೇಖ್‌ಪಾಸ್ ಮಾರ್ಗವಾಗಿ ನಡೆಯಲಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ತಿಳಿಸಿದೆ.ಈ ಯಾತ್ರೆ ಜೂನ್, ಜುಲೈ ಹಾಗೂ

ಆಗಸ್ಟ್ ತಿಂಗಳವರೆಗೆ ಮುಂದುವರೆಯುವ ನಿರೀಕ್ಷೆಯಿದೆ. ಕೈಲಾಸ ಪರ್ವತವನ್ನು ಶಿವನ ನಿವಾಸದಂದು ಪರಿಗಣಿಸುವ ಹಿಂದೂ ಮಾತ್ರವಲ್ಲದೇ ಜೈನ ಹಾಗೂ ಬೌದ್ಧ ಧರ್ಮಿಯರು ಈ ಯಾತ್ರೆ ಕುರಿತಂತೆ ಆಧ್ಯಾತ್ಮಿಕ ಭಾವನೆ ಹೊಂದಿದ್ದಾರೆ.ಯಾತ್ರಿಕರ ಸುರಕ್ಷತೆಗೆ ಅನುಕೂಲವಾಗುವಂತೆ ಸಿಕ್ಕಿಂ ಸರ್ಕಾರ ವಿಶ್ರಾಂತಿ ಕೇಂದ್ರಗಳು ಸೇರಿದಂತೆ ಇತರ ಮೂಲಸೌಕರ್ಯಗಳನ್ನು ಆಧುನಿಕರಿಸಿದೆ.

********

ಉತ್ತರಾಖಂಡದಲ್ಲಿ ಭಾರೀ ಮಳೆಯ ಪರಿಣಾಮದಿಂದ ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದ್ದ ಚಾರ್‌ಧಾಮ್ ಯಾತ್ರೆ ಇಂದು ಪುನರಾರಂಭವಾಗಿದೆ.ಗಢ್ವಾಲ್ ಆಯುಕ್ತ ವಿಜಯ ಶಂಕರ್ ಪಾಂಡೆ ಈ ಕುರಿತು ಮಾಹಿತಿ ನೀಡಿದ್ದು, ಯಾತ್ರಾ ಮಾರ್ಗದಲ್ಲಿನ ಜಿಲ್ಲಾಧಿಕಾರಿಗಳಿಗೆ ತಮ್ಮ ಪ್ರದೇಶದ ಸ್ಥಳೀಯ ಹವಾಮಾನ ಪರಿಸ್ಥಿತಿಯ ಆಧಾರದ ಮೇಲೆ ವಾಹನ ಸಂಚಾರ ನಿಯಂತ್ರಿಸುವಂತೆ ಸೂಚನೆ ನೀಡಲಾಗಿದೆ ಎಂದಿದ್ದಾರೆ.ಈ ನಡುವೆ ಕಳೆದ ೨ ದಿನಗಳಿಂದ ಸುರಿಯುತ್ತಿರುವ ನಿರಂತರ ಮಳೆಯಿಂದಾಗಿ ರಾಜ್ಯದ ಪ್ರಮುಖ ನದಿಗಳಲ್ಲಿ ನೀರಿನ ಮಟ್ಟ ಗಣನೀಯವಾಗಿ ಏರಿಕೆಯಾಗಿದೆ. ಬೆಟ್ಟ-ಪ್ರದೇಶಗಳಲ್ಲಿ ಭೂಕುಸಿತದ ಹಿನ್ನೆಲೆ ನೂರಕ್ಕೂ ಅಧಿಕ ರಸ್ತೆಗಳನ್ನು ತಾತ್ಕಾಲಿಕವಾಗಿ ಬಂದ್ ಮಾಡಲಾಗಿದೆ.ಗಂಗೋತ್ರಿ ಹಾಗೂ ಯಮುನೋತ್ರಿ ರಾಷ್ಟ್ರೀಯ ಹೆದ್ದಾರಿಗಳಲ್ಲಿಯೂ ಹಲವೆಡೆ ಭೂಕುಸಿತದ ವರದಿಯಾಗಿದೆ. ನಿರಂತರ ಮಳೆಯಿಂದಾಗಿ ಪ್ರಗತಿಯಲ್ಲಿರುವ ಕಲ್ಲು, ಮಣ್ಣು ತೆರವು ಕಾರ್ಯಾಚರಣೆಗೆ ಹಿನ್ನಡೆಯುಂಟಾಗಿದೆ. ಹವಾಮಾನ ಇಲಾಖೆ ರಾಜ್ಯದ ವಿವಿಧ ಭಾಗಗಳಲ್ಲಿ ಭಾರೀ ಮಳೆಯ ಮುನ್ಸೂಚನೆ ನೀಡಿದ್ದು, ಸ್ಥಳೀಯ ನಿವಾಸಿಗಳು ಹಾಗೂ ಯಾತ್ರಿಕರು ಎಚ್ಚರಿಕೆ ವಹಿಸುವಂತೆ ಸೂಚಿಸಿದೆ.

********

ಧರ್ಮಶಾಲಾದ ತಪೋವನದಲ್ಲಿಂದು ನಡೆಯಲಿರುವ ಕಾಮನ್‌ವೆಲ್ತ್ ಸಂಸದೀಯ ಸಂಸ್ಥೆ ವಲಯ-೨ರ ವಾರ್ಷಿಕ ಸಮ್ಮೇಳನವನ್ನು ಲೋಕಸಭಾ ಅಧ್ಯಕ್ಷ ಓಂ ಬಿರ್ಲಾ ಉದ್ಘಾಟಿಸಲಿದ್ದಾರೆ. ಈ ವಲಯದಲ್ಲಿ ದೆಹಲಿ, ಹರಿಯಾಣ, ಹಿಮಾಚಲ ಪ್ರದೇಶ, ಜಮ್ಮು ಮತ್ತು ಕಾಶ್ಮೀರ, ಪಂಜಾಬ್ ರಾಜ್ಯಗಳು

ಸೇರಿವೆ.ಪ್ರಜಾಪ್ರಭುತ್ವದ ಸಂಸ್ಥೆಗಳನ್ನು ಬಲಪಡಿಸುವುದು, ಉತ್ತಮ ಅಭ್ಯಾಸಗಳನ್ನು ಹಂಚಿಕೊಳ್ಳುವುದು ಮತ್ತು ಆಧುನಿಕ ಯುಗದಲ್ಲಿ ಆಡಳಿತ ಮತ್ತು ಶಾಸನಾತ್ಮಕ ಕಾರ್ಯಚಟುವಟಿಕೆಗೆ ಹೊಸ ಮಾರ್ಗಗಳನ್ನು ಅನ್ವೇಷಿಸುವುದು ಈ ಸಮ್ಮೇಳನದ ಉದ್ದೇಶವಾಗಿದೆ.ಡಿಜಿಟಲ್ ಯುಗದಲ್ಲಿ ಉತ್ತಮ ಆಡಳಿತ - ಸಂಪನ್ಮೂಲ ನಿರ್ವಹಣೆ, ಪ್ರಜಾಪ್ರಭುತ್ವದ ರಕ್ಷಣೆ ಮತ್ತು ನಾವೀನ್ಯತೆಯ ಅಳವಡಿಕೆ, ಈ ವರ್ಷದ ಸಮ್ಮೇಳನದ ಘೋಷವಾಕ್ಯವಾಗಿದೆ.ಕಾಮನ್‌ವೆಲ್ತ್ ಸಂಸದೀಯ ಸಂಸ್ಥೆ ಜಾಗತಿಕ ಸಂಸ್ಥೆಯಾಗಿದ್ದು, ಜಗತ್ತಿನ ಸಂಸದರನ್ನು ಒಟ್ಟು ಗೂಡಿಸಿ, ಸಂಸದೀಯ ಪ್ರಜಾಪ್ರಭುತ್ವವನ್ನು ಬಲಪಡಿಸಲು ಕಾರ್ಯ ನಿರ್ವಹಿಸುತ್ತದೆ.

********

ಪ್ರಾಥಮಿಕ ಶಾಲೆಗಳಲ್ಲಿ ಹಿಂದಿ ಭಾಷೆಯನ್ನು ಮೂರನೇ ಭಾಷೆಯಾಗಿ ಸೇರಿಸುವ ಮೂರು ಭಾಷಾ ನೀತಿಯ ಕುರಿತ ಪ್ರಸ್ತಾವನೆಗಳನ್ನು ಮಹಾರಾಷ್ಟ್ರ ಸರ್ಕಾರ ರದ್ದುಗೊಳಿಸಿದೆ.ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ನಿನ್ನೆ ಮೂರು ಭಾಷಾ ನೀತಿಯ ಪುನರ್ ಪರಿಶೀಲನೆಗಾಗಿ ಒಂದು ಸಮಿತಿ ರಚಿಸಲಾಗುವುದು ಎಂದು ಘೋಷಿಸಿದ್ದಾರೆ.

********

ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿ ವಿರುದ್ಧ ಸ್ವಾತಂತ್ರ್ಯ ಹಾಗೂ ನ್ಯಾಯಕ್ಕಾಗಿ ತ್ಯಾಗಗೈದ ಸಂತಾಲಿ ಜನರಿಗೆ ಗೌರವ ನಮನ ಸಲ್ಲಿಸುವ ಹುಲ್ ದಿನವನ್ನು ಆಚರಿಸಲಾಗುತ್ತಿದೆ.೧೮೫೫ ರ ಈ ದಿನ ಆರಂಭವಾದ ಬೃಹತ್ ಜನಪರ ಹೋರಾಟವನ್ನು ಸಂತಾಲ್ ಹುಲ್ ಎಂದು ಕರೆಯಲಾಯಿತು. ಇದು ಬ್ರಿಟಿಷ್ ವಸಹಾತುಶಾಹಿ ಆಡಳಿತ ಮತ್ತು ಇತರ ದಬ್ಬಾಳಿಕೆ ನೀತಿಗಳ ವಿರುದ್ಧ ನಡೆದ ಪ್ರಮುಖ ಹೋರಾಟವಾಗಿತ್ತು.ತಮ್ಮ ಹಕ್ಕುಗಳು ಮತ್ತು ತಮಗಾಗಿರುವ ಅನ್ಯಾಯದ ವಿರುದ್ಧದ ಹೋರಾಟದ ಭಾಗವಾಗಿ ಸಿಧು ಮತ್ತು ಕಾನ್ಹು ಮುರ್ಮು ತಮ್ಮ ಸಹೋದರಿಯರಾದ ಫುಲೊ ಮತ್ತು ಜಾನೊ ಜೊತೆಗೂಡಿ ಬುಡಕಟ್ಟು ೨ವಕರನ್ನೊಳಗೊಂಡ ಒಂದು ಬೃಹತ್ ಪಡೆಯನ್ನು ನಿರ್ಮಿಸಿದರು.ಇದು ಭಾರತೀಯ ಸ್ವಾತಂತ್ರ್ಯ ಹೋರಾಟದ ಒಂದು ಪ್ರಮುಖ ಘಟ್ಟವಾಗಿದ್ದು, ತಳಮಟ್ಟದ ನಾಯಕತ್ವ ಮತ್ತು

ಬುಡಕಟ್ಟು ಜನಾಂಗದ ಹಕ್ಕುಗಳ ಕುರಿತಾಗಿ ಪ್ರಾಮುಖ್ಯತೆ ಪಡೆದಿದೆ. ಈ ಹೋರಾಟದ ಪರಿಣಾಮ ನಂತರ ಸಂತಾಲ್ ಪರ್ಗಣಾ ಭೂ ಸಂಹಿತೆ ಮತ್ತು ೧೯೦೮ರಲ್ಲಿ ಚೋಟಾ ನಾಗ್ಪುರ್ ಭೂಸಂಹಿತೆ ಜಾರಿಗೊಳ್ಳಲು ಕಾರಣವಾಯಿತು. ಈ ಕಾನೂನುಗಳು ಗಿರಿಜನ ಸಮುದಾಯದ ಭೂ ಹಕ್ಕುಗಳು ಮತ್ತು ಸಾಂಸ್ಕೃತಿಕ  ಸ್ವಾಯತ್ತತೆಯನ್ನು ರಕ್ಷಿಸುವಲ್ಲಿ ಪ್ರಮುಖ ಪಾತ್ರ ವಹಿಸಿದೆ.ಹುಲ್ ದಿವಸದ ಅಂಗವಾಗಿ ರಾಷ್ಟ್ರಪತಿ ದ್ರೌಪದಿ ಮುರ್ಮು, ದೇಶಕ್ಕಾಗಿ ತ್ಯಾಗ ಬಲಿದಾನಗೈದ ಸಂತಾಲಿ ಸಮುದಾಯದ ಸದಸ್ಯರಿಗೆ ಗೌರವ ನಮನ ಸಲ್ಲಿಸಿದರು.

********

ವಿಶ್ವವಿದ್ಯಾಲಯ ಧನಸಹಾಯ ಆಯೋಗ ದೇಶದಾದ್ಯಂತ ನಾಲ್ಕು ಐಐಟಿಗಳು, ಮೂರು ಐಐಎಂಗಳೂ ಸೇರಿದಂತೆ, ೮೯ ಶೈಕ್ಷಣಿಕ ಸಂಸ್ಥೆಗಳಿಗೆ, ರ್‍ಯಾಗಿಂಗ್ ನಿಷೇಧ ಸಂಬಂಧಿತ ನಿಯಮಾವಳಿಗಳನ್ನು ಪಾಲಿಸದ ಕಾರಣ ನೋಟಿಸ್ ಜಾರಿ ಮಾಡಿದೆ.ರ್‍ಯಾಗಿಂಗ್ ಕುರಿತು ೨೦೦೯ ರ ಯುಜಿಸಿ ನಿಯಮಾವಳಿಗಳ ಪ್ರಕಾರ, ಪ್ರತಿಯೊಂದು ಯುಜಿಸಿಗೆ ಉನ್ನತ ಶಿಕ್ಷಣ ಸಂಸ್ಥೆಗಳ ವಿದ್ಯಾರ್ಥಿಗಳಿಂದ ಪ್ರತಿಜ್ಞಾಪತ್ರ ಹಾಗೂ ಸಂಸ್ಥೆಯಿಂದ ಅನುಸರಣಾ ಪತ್ರ ಸಲ್ಲಿಸುವುದು ಕಡ್ಡಾಯವಾಗಿದೆ. ಆದರೆ, ಹಲವು ಸಂಸ್ಥೆಗಳು ಕಡ್ಡಾಯ ಪ್ರತಿಜ್ಞಾಪತ್ರಗಳು ಮತ್ತು ಅನುಸರಣಾ ಪತ್ರಗಳನ್ನು ಸಲ್ಲಿಸಿಲ್ಲ ಎಂದು ಯುಜಿಸಿಯ ನೋಟಿಸ್ ತಿಳಿಸಿದೆ.

********

ಪ್ರಸಕ್ತ ಸಾಲಿನ ಗ್ರ್ಯಾಂಡ್ ಸ್ಲ್ಯಾಮ್ ವಿಂಬಲ್ಡನ್ ಟೆನ್ನಿಸ್ ಟೂರ್ನಿ, ಲಂಡನ್‌ನ ಆಲ್ ಇಂಗ್ಲೆಂಡ್ ಕ್ಲಬ್‌ನಲ್ಲಿಂದು ಪ್ರಾರಂಭವಾಗಲಿದ್ದು, ಜುಲೈ ೧೩ರಂದು ಪುರುಷರ ಸಿಂಗಲ್ಸ್ ಫೈನಲ್‌ನೊಂದಿಗೆ ಕೊನೆಗೊಳ್ಳಲಿದೆ.ಹಾಲಿ ಚಾಂಪಿಯನ್ ಕಾರ್ಲೋಸ್ ಅಲ್ಕರಾಜ್, ವಿಶ್ವದ ಅಗ್ರ ಶ್ರೇಯಾಂಕಿತ ಜಾನಿಕ್ ಸಿನ್ನರ್ ಮತ್ತು ದಾಖಲೆಯ ೨೪ ಬಾರಿ ಗ್ರ್ಯಾಂಡ್ ಸ್ಲ್ಯಾಮ್ ವಿಜೇತ ನೊವಾಕ್ ಜೊಕೊವಿಕ್ ಪ್ರಶಸ್ತಿಗಾಗಿ ಸೆಣಸಲಿದ್ದಾರೆ.ಪುರುಷರ ಡಬಲ್ಸ್‌ನಲ್ಲಿ ನಾಲ್ವರು ಭಾರತೀಯ ಆಟಗಾರರು, ಪ್ರಸಕ್ತ ವಿಂಬಲ್ಡನ್ ನಲ್ಲಿ ಸ್ಪರ್ಧಿಸಲಿದ್ದಾರೆ. ಅನುಭವಿ ರೋಹನ್ ಬೋಪಣ್ಣ ಬೆಲ್ಜಿಯಂನ ಸ್ಯಾಂಡರ್ ಗಿಲ್ಲೆ ಜೊತೆಗೂಡಿ

ಆಡಲಿದ್ದಾರೆ, ಯೂಕಿ ಭಾಂಬ್ರಿ-ಅಮೆರಿಕದ ರಾಬರ್ಟ್ ಗ್ಯಾಲೋವೇ ಜೊತೆ ಕೈಜೋಡಿಸಿದ್ದಾರೆ. ರಿತ್ವಿಕ್ ಬೊಲ್ಲಿಪಲ್ಲಿ-ರೊಮೇನಿಯಾದ ನಿಕೋಲಸ್ ಬ್ಯಾರಿಯೆಂಟೋಸ್ ಅವರೊಂದಿಗೆ ಆಡಲಿದ್ದಾರೆ. ಎನ್. ಶ್ರೀರಾಮ್ ಬಾಲಾಜಿ- ಮೆಕ್ಸಿಕೊದ ಮಿಗುಯೆಲ್ ರೇಯೆಸ್-ವರೆಲಾ ಜೊತೆಯಾಗಿ ಕಣಕ್ಕಿಳಿಯಲಿದ್ದಾರೆ.

********

ಯುಎಸ್ ಓಪನ್ ಬ್ಯಾಡ್ಮಿಂಟನ್‌ನಲ್ಲಿ, ೨೦ ವರ್ಷದ ಆಯುಷ್ ಶೆಟ್ಟಿ ಪ್ರಶಸ್ತಿ ಗೆಲ್ಲುವ ಮೂಲಕ ಈ ಋತುವಿನಲ್ಲಿ ಬಿಡಬ್ಲ್ಯೂಎಫ್ ವರ್ಲ್ಡ್ ಟೂರ್ ಪ್ರಶಸ್ತಿಯನ್ನು ಗೆದ್ದ, ಮೊದಲ ಭಾರತೀಯ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

ಫೈನಲ್‌ನಲ್ಲಿ ಕೆನಡಾದ ಬ್ರಿಯಾನ್ ಯಾಂಗ್ ವಿರುದ್ಧ ೨೧-೧೮, ೨೧೧೩ ಅಂತರದ ಭರ್ಜರಿ ಜಯ ಸಾಧಿಸುವ ಮೂಲಕ ಆಯುಷ್, ಇತಿಹಾಸ ನಿರ್ಮಿಸಿದ್ದಾರೆ.೨೦೨೩ ರ ಕೆನಡಾ ಓಪನ್ ನಂತರ, ವಿದೇಶಿ ನೆಲದಲ್ಲಿ ಬಿಡಬ್ಲ್ಯೂಎಫ್ ಟೂರ್‌ನಲ್ಲಿ ಭಾರತಕ್ಕೆ ಮೊದಲ ಪುರುಷರ ಸಿಂಗಲ್ಸ್ ಪ್ರಶಸ್ತಿಯನ್ನು ತಂದುಕೊಟ್ಟ ಹೆಗ್ಗಳಿಕೆಗೆ ಆಯುಷ್ ಭಾಜನರಾದರು.

********

ಬರ್ಲಿನ್‌ನಲ್ಲಿ ನಿನ್ನೆ ರಾತ್ರಿ ನಡೆದ ಎಫ್‌ಐಎಚ್ ಪ್ರೊ ಲೀಗ್ ಹಾಕಿ ಪಂದ್ಯಾವಳಿಯಲ್ಲಿ, ಭಾರತೀಯ ಮಹಿಳಾ ಹಾಕಿ ತಂಡವು ಚೀನಾ ವಿರುದ್ಧ ೨-೩ ಅಂತರದಿಂದ ಸೋಲುವುದರೊಂದಿಗೆ ಸತತ ಎಂಟನೇ ಸೋಲನ್ನು ಅನುಭವಿಸಿತು.

ಈ ಸೋಲಿನೊಂದಿಗೆ, ಭಾರತ, ಒಂಬತ್ತು ತಂಡಗಳ ಅಂಕಪಟ್ಟಿಯಲ್ಲಿ, ೧೬ ಪಂದ್ಯಗಳಿಂದ ಕೇವಲ ೧೦ ಅಂಕಗಳನ್ನು ಗಳಿಸಿ ಕೊನೆಯ ಸ್ಥಾನದಲ್ಲಿದೆ.

********